# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ

## ದಿನಾಂಕ: 01-10-2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 01-10-2022 ರಂದು ಬೆಳಗ್ಗೆ 11.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-01ರ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ರಾಮಸಂಜೀವಯ್ಯ | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-01) |
| 02 | ಶ್ರೀ.ದೇವರಾಜಯ್ಯ.ಕೆ.ಬಿ. | ಸಹಾಯಕ ಅಭಿಯಂತರರು (ವಾರ್ಡ್ ನಂ-01) (ಸಾಂದರ್ಭಿಕ ರಜೆ) |
| 03 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) ಗೈರು ಹಾಜರಾಗಿರುತ್ತಾರೆ. |
| 04 | ಶ್ರೀ.ಅಶೋಕ್ .ಎಂ.ಆರ್ | ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ ಗೈರು ಹಾಜರಾಗಿರುತ್ತಾರೆ. |
| 05 | ಶ್ರೀ.ಶಿವಕುಮಾರ್.ಎ.ವಿ | ರೆವಿನ್ಯೂ ಇನ್ಸ್‌ಪೇಕ್ಟರ್ |
| 06 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 07 | ಶ್ರೀ. ವಿನಯ ಕುಮಾರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 08 | ಶ್ರೀ. ಎನ್. ಶ್ರೀರಾಮ ರೆಡ್ಡಿ | ರೆವಿನ್ಯೂ ಇನ್ಸ್‌ಪೇಕ್ಟರ್ |
| 09 | ಶ್ರೀ.ವಿವೇಕ್ | ಕಿರಿಯ ಆರೋಗ್ಯಪರಿವೀಕ್ಷಕರು ವಾಡ್-1 |
| 10 | ಶ್ರೀ.ಕುಮಾರ್ ಸ್ವಾಮಿ | ಜಾನುವಾರ ಅಧಿಕಾರಿಗಳು |
| 11 | ಶ್ರೀ.ಶಿವಶಂಕರ್ | ದ್ವೀತಿಯ ದರ್ಜೆ ಸಹಾಯಕರು |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ.ಶಿವಕುಮಾರ್ | ಸ್ಥಳೀಯ ಮುಖಂಡರು |
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |

| | | |
|---|---|---|
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಶ್ರೀ.ದಶರಥ | ಯಲಹಂಕ |
| 08 | ಶ್ರೀ.ಎ.ಎನ್.ಮದುಸೂದನ್ (ಮಂಜುನಾಥ) | ಎಲೆಕ್ಟ್ರೀಕಲ್ಸ್ ಗುತ್ತಿಗೆದಾರರು |
| 09 | ಶ್ರೀ.ಆಕಾಶ್ | ಮಾರ್ಷಲ್ |

ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ರಾಮಸಂಜೀವಯ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಬೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 17-09-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಓದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಆರ್.ಆರ್.ಗೋಲ್ಡ್ ಪ್ಯಾಲೆಸ್ ಮುಂಬಾಗ ಮತ್ತು ಪೋಸ್ಟ್ ಆಪೀಸ್ ಮುಂಭಾಗ ಬಿ.ಎಂ.ಟಿ.ಸಿ ಬಸ್‌ಗಳು ಸುಮಾರು ಅರ್ದ ಗಂಟೆಗಳ ಕಾಲ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವ ಬಗ್ಗೆ ಈ ಹಿಂದೆ ಹಲವಾರು ಭಾರಿ ದೂರುಗಳನ್ನು ಸಲ್ಲಿಸಿದ್ದರೂ ಸಹ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಬಿ.ಎಂ.ಟಿ.ಸಿ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲವೆಂದು ಸಲ್ಲಿಸಿದ್ದ ದೂರಿನ ಬಗ್ಗೆ ಮತ್ತೊಮ್ಮೆ ಸಭೆಯಲ್ಲಿ ದೂರನ್ನು ಸಲ್ಲಿಸಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಾಗಿದ್ದ ಶ್ರೀ. ರಮೇಶ್ ಡಿಪೋ 11 ಯಲಹಂಕದ ವ್ಯವಸ್ಥಾಪಕರು ಸಭೆಯಲ್ಲಿ ಮುಂದಿನ ಸಭೆಗೆ ವಿವರೊಂದಿಗೆ ವರದಿ ಸಲ್ಲಿಸುತ್ತೇನೆಂದು ಸಭೆಗೆ ತಿಳಿಸಿದರು. | ಬಿ.ಎಂ.ಟಿ.ಸಿ ಡಿಪೋ ಮ್ಯಾನೇಜರ್ ರಮೇಶ್ |
| 02 | ಯಲಹಂಕದಲ್ಲಿರುವ ಮುಖ್ಯರಸ್ತೆಗಳಲ್ಲಿ ಹಸುಗಳು ಬೇಕಾಬಿಟ್ಟು ರೋಡ್‌ನಲ್ಲಿ ಓಡಾಡುತ್ತಿರುವುದರಿಂದ ವಾಹನ ಸವಾರರಿಗೆ ಅಪಘಾತಗಳು ಉಂಟಾಗಿರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ | ಇದಕ್ಕೆ ಸಂಬಂದಿಸಿದಂತೆ ಕುಮಾರಸ್ವಾಮಿ ಜಾನುವಾರು ಅಧಿಕಾರಿಗಳು ಮಾತನಾಡಿ ಸೂಕ್ತ ಕ್ರಮ ವಹಿಸುವುದಾಗಿ ಸಬೆಯಲ್ಲಿ ತಿಳಿಸಿದರು | ಪಶುಸಂಗೋಪನಾ ಅಧಿಕಾರಿಗಳು ಯಲಹಂಕ ವಲಯ |

| | | | |
|---|---|---|---|
| | ಸಭೆಯಲ್ಲಿ ಹಾಜರಿದ್ದ ಟ್ರಾಫಿಕ್ ಪೊಲಿಸ್ ರವರು ನೊಡೆಲ್ ಅಧಿಕಾರಿಗಳಿಗೆ ಕೋರಿದರು | | |
| 03 | ಯಲಹಂಕ ರಾಮಯ್ಯ ಕಾಂಪ್ಲೇಕ್ಸ್ ಮುಂಭಾಗ, ಶುಶ್ರೂಷ ಆಸ್ಪತ್ರೆ ಮುಂಭಾಗ, ಆರ್.ಆರ್.ಗೋಲ್ಡ್ ಪಾಲೇಸ್ ಮುಂಭಾಗ, ಮತ್ತು ಬಿ.ಬಿ.ರಸ್ತೆಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ವೆಂದು ಸಭೆಯಲ್ಲಿ ಸ್ಥಳಿಯ ನಿವಾಸಿಗಳಾದ ಶ್ರೀ.ಅ.ಬ.ಶಿವಕುಮಾರ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ವಿವೇಕ್ ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ಜಾಗಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನೊಡೆಲ್ ಅಧಿಕಾರಿಗಳು ತಿಳಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ ವಲಯ. |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03/10/22

ಶ್ರೀ.ಕೆ.ಬಿ.ದೇವರಾಜಯ್ಯ
ಸಹಾಯಕ ಅಭಿಯಂತರರು

ಶ್ರೀ.ರಾಮಸಂಜೀವಯ್ಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-01

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಯಲಹಂಕ ವಿಭಾಗ/ವಿದ್ಯುತ್/ರಸ್ತೆ ಮತ್ತು ಮೂಲಭೂತ ಸೌಕಾರ್ಯ/ಯೋಜನೆ/ಕೆರೆಗಳು/ ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ/ ವಿದ್ಯುತ್/ ಬೇಸ್ಕಾಂ/ ಬಿಡಬ್ಲ್ಯೂ.ಎಸ್.ಎಸ್.ಬಿ/ಬೊರೆವೆಲ್ ಡಿವಿಷನ್/ ಯೋಜನೆ/ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ/ಜಾಹಿರಾತು ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
7. ಆರಕ್ಷಕ ನೀರಿಕ್ಷಕರು ಯಲಹಂಕ ಪೊಲೀಸ್ ಠಾಣೆ ಸಂಚಾರಿ/ ಕಾನೂನು ಸುವ್ಯವಸ್ಥೆ/ ಯಲಹಂಕ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ.
8. ಜಾನುವಾರಿ ಅಧಿಕಾರಿಗಳು ಪಶುಪಾಲನೆ ವಿಭಾಗ ಯಲಹಂಕ ವಲಯ ರವರ ಸೂಕ್ತ ಕ್ರಮಕ್ಕಾಗಿ.
9. ಅಧೀಕ್ಷಕರು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.
10. ಡಿಪೋ ಮ್ಯಾನೇಜರ್ ಡಿಪೊ-13 ಪುಟ್ಟೇನಹಳ್ಳಿ ಡಿಪೋ ಯಲಹಂಕ ಬೆಂಗಳೂರು ಸೂಕ್ತ ಕ್ರಮಕ್ಕಾಗಿ.
11. ಕಛೇರಿ ಕಡತಕ್ಕೆ.